# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ

ಸಿ.ಸಿ ನಂ.721-2024

ಪಿರ್ಯಾದಿದಾರರು ಕರ್ನಾಟಕ ಸರಕಾರದ ಪರವಾಗಿ
ಕಲಘಟಗಿ ಪೋಲಿಸ ಠಾಣೆ.

ಆಪಾದಿತ ಭರತೇಶ ಸುರೇಶ ಸಾವಂತನವರ

**<u>ಆಪಾದನೆ</u>**

ಶ್ರೀ ಗಣೇಶ ಎನ್, ಎಂ ಎ ಎಲ್ ಎಲ್ ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ಗಳು ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ.

ಕಲಘಟಗಿ ಪೊಲೀಸ ಠಾಣೆಯ ಸರಹದ್ದಿಯ ಪೈಕಿ ಬಿ ಗುಡಿಹಾಳ ದಿಂದ ಗಳಗಿಹುಲಕೊಪ್ಪಕ್ಕೆ ಹೋಗುವ ಡಾಂಬರ ರಸ್ತೆ ಮೇಲೆ ದಿನಾಂಕಃ 01-11-2023 ರಂದು ಸಂಜೆ 4-00 ಗಂಟೆಯ ಸುಮಾರಿಗೆ ಆಪಾದಿತನಾದ ನೀನು ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂ. ಕೆಎ-25 ಇವಿ-7241 ನೇದ್ದರಲ್ಲಿ ಹಿಂಬದಿ ಚಂದ್ರವ್ವಾ ಸವಂತನವರ ಇವರಿಗೆ ಕೊಡ್ರಿಸಿಕೊಂಡು ಬಿ ಗುಡಿಹಾಳ ದಿಂದ ಗಳಗಿಹುಲಕೊಪ್ಪ ಕಡೆಗೆ ಅತೀ ಜೋರು ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಅಪಾರಾಧವನ್ನು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆಪಾದಿತನಾದ ನೀನು ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂ. ಕೆಎ-25 ಇವಿ-7241 ನೇದ್ದರಲ್ಲಿ ಹಿಂಬದಿ ಚಂದ್ರವ್ವಾ ಸವಂತನವರ ಇವರಿಗೆ ಕೊಡ್ರಿಸಿಕೊಂಡು ಬಿ ಗುಡಿಹಾಳ ದಿಂದ ಗಳಗಿಹುಲಕೊಪ್ಪ ಕಡೆಗೆ ಅತೀ ಜೋರು ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿ ಮೋಟಾರ ಸೈಕಲ ಹಿಂದೆ ಕುಳಿತ ಚಂದ್ರವ್ವಾ ಇವರು ಮೋಟಾರ ಸೈಕಲ ಮೇಲಿಂದ ಕಳಗೆ ಬೀಳುವಂತೆ ಮಾಡಿ ಅವರ ತಲೆಗೆ ಭಾರಿಗಾಯ ಹೊಂದಿ ಹುಬ್ಬಳ್ಳಿ ಶಕುಂತಲಾ ಆಸ್ಪತ್ರೆಯಲ್ಲಿ ಉಪಚಾರದಲ್ಲಿದ್ದಾಗ ಉಪಚಾರ ಫಲಿಸದೇ ದಿನಾಂಕಃ 03-11-2023 ರಂದು ಬೆಳಗಿನ 11-00 ಗಂಟೆಯ ಸುಮಾರಿಗೆ ಮೃತ ಪಡುವಂತೆ ಮಾಡಿದ್ದು . ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಮೂರನೇಯದಾಗಿಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆಪಾದಿತನಾದ ನೀನು ನಿನ್ನ ಮೋಟಾರ ಸೈಕಲ ನಂ. ಕೆಎ-25 ಇವಿ-7241 ನ್ನು ವಿಮಾ ಸೌಲಭ್ಯ ನವಿಕರಿಸದೇ ಸದರಿ ವಾಹನವನ್ನು ಚಾಲನೆ ಮಾಡಿದ್ದು, ಆ ಮೂಲಕ ನೀವು ಮೋಟಾರ ವಾಹನ ಅಧಿನಿಯಮ ಕಲಂ 196 ಸಹವಾಚಕ 146 ರ ಅಡಿಯಲ್ಲಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ?.

ಪ್ರಶ್ನೆ:1) ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

ಆಪಾದಿತನ ಉತ್ತರಃ

ಪ್ರಶ್ನೆ:2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?

ಆಪಾದಿತನ ಉತ್ತರಃ

( ಆಪಾದಿತನಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತರ ಉತ್ತರವನ್ನು ಪಡೆಯಲಾಗಿದೆ.)

ಸ್ಥಳಃ ಕಲಘಟಗಿ

ದಿನಾಂಕಃ 09-10-2024

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳು
ಕಲಘಟಗಿ